**ದಿಃ 30-06-2022 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆಎಸ್ ಎನ್ ವಕೀಲರಿಂದಃ**

ನಾನು 2018 ರಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ 2008 ರಲ್ಲಿ ನಿವೃತ್ತಿ ಹೊಂದಿದ್ದೆ. ದಾವಾದ ವಾದಿಯರು 18.06.2018 ರಂದು ಪ್ರತಿವಾದಿ ಯಾದ 1 ರಿಂದ 3 ನೇ ದವರಿಗೆ ಒಂದು ದಾವಾ ಪೂರ್ವ ನೋಟೀಸು ಕಳುಹಿಸಿದ್ದರು ಎಂದರೆ ಸರಿ . ಸದರಿ ನೋಟೀಸಿನಲ್ಲಿ ಕಾಣಿಸಿದ್ದ ಸ್ವತ್ತುಗಳೇ ಈ ದಾವಾ ದ ಷೆಡ್ಯೂಲ್ ಸ್ವತ್ತುಗಳು ಎಂದರೆ ಸರಿ . ಈ ಸಂಬಂದ ದಿಃ 05.07.2018 ರಂದು ನಮ್ಮ ವಕೀಲರ ಮೂಲಕ ಜವಾಬು ನೋಟೀಸು ಕೊಡಿಸಿದ್ದೇವೆ ಎಂದರೆ ಸರಿ . ಸದರಿ ಜವಾಬು ನೋಟೀಸಿನಲ್ಲಿ ನಾವು ಕಾಣಿಸಿದಂತೆ ಮತ್ತು ನಮ್ಮ ಲಿಖಿತ ಹೇಳಿಕೆಯಲ್ಲಿ ಕಾಣಿಸಿದಂತೆ ನಮ್ಮ ಸಹೋದರಿ ಅಂದರೆ ವಾದಿ ಕೆಂಚಮ್ಮ ಇವರ ಮಕ್ಕಳು ವಾದಿಯ ಕುಟುಂಬದಿಂದ ಅಂದರೆ ಒಟ್ಟು ಕುಟುಂಬದಿಂದ ಹೊರಗೆ ಹೋಗಿದ್ದಾರೆಂದು ಸುಳ್ಳು ಕಾಣಿಸಿದ್ದೇವೆ ಎಂದರೆ ಸರಿಯಲ್ಲ.

ವಾದಿಯ ಮಗಳಾದ ವಿಜಯಲಕ್ಷ್ಮಿ ಎಂಬುವರು ಆಕೆಯ ಮದುವೆಯ ಪೂರ್ವದಲ್ಲಿ ಒಟ್ಟು ಕುಟುಂಬದಲ್ಲಿ ವಾಸ ವಿದ್ದರು ಎಂದರೆ ಸರಿಯಲ್ಲ . ರವಿಶಂಕರ ಮತ್ತು ಷಣ್ಮುಖ ರವರು ಈಗಲೂ ಒಟ್ಟು ಕುಟುಂಬದಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಅವರು ನಮ್ಮ ಕುಟುಂಬಕ್ಕೆ ಯಾವುದೇ ರೀತಿ ಸಂಬಂದ ಇರುವುದಿಲ್ಲ ಅವರು ವಾದಿ ಮತ್ತು ವಾದಿಯ ಗಂಡನ ಕುಟುಂಬದ ಸದಸ್ಯರಾಗಿರುತ್ತಾರೆ. ಈಗ ಸೂಚಿಸಿದ 3 ಜನರು ಅವರು ಆ ರೀತಿ ಒಟ್ಟು ಕುಟುಂಬದಿಂದ ಹೊರಬಂದಿದ್ದಾರೆ ಆದ್ದರಿಂದ ಒಟ್ಟು ಕುಟುಂಬದ ಸದಸ್ಯರಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯ ಗಂಡ ಕರಿಯಪ್ಪ ಇವರು ಮೃತ ಪಟ್ಟಿದ್ದು ಯಾವಾಗ ಮತ್ತು ಎಲ್ಲಿ ಮೃತ ಪಟ್ಟರು ಎಂದು ಕೇಳಿದ ಪ್ರಶ್ನೆಗೆ ಅವರು ಮೃತಪಟ್ಟಿಲ್ಲ ಆದರೆ 35 ವರ್ಷಕ್ಕೂ ಮೇಲಾಗಿ ಅವರು ಮನೆ ಬಿಟ್ಟು ಎಲ್ಲಿಗೋ ಹೊರಟುಹೋಗಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಕರಿಯಪ್ಪ

ನನ್ನ ತಾಯಿಯಾದ ಸಾಕಮ್ಮನ ತಮ್ಮ ಎಂದರೆ ಸರಿ . ಕರಿಯಪ್ಪ ನ ತಂದೆಯ ಹೆಸರು ಹನುಮಜ್ಜ ಅವರ ತಾಯಿಯ ಹೆಸರು ಗೊತ್ತಿಲ್ಲ. ಅವರ ತಾಯಿಯ ಹೆಸರು ದೇವಮ್ಮ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಕರಿಯಪ್ಪನ ತಂದೆ ತಾಯಿಗಳು ಆತ 9 ತಿಂಗಳು ಮಗುವಾಗಿದ್ದಾಗಲೆ ತೀರಿಕೊಂಡರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಆ ರೀತಿ ಆತ 9 ತಿಂಗಳು ಇರುವಾಗ ಅವರ ತಾಯಿ ತೀರಿಕೊಂಡಿರಬಹುದು ಆದರೆ ಹನಮಜ್ಜ ಬಹಳ ವರ್ಷವಿದ್ದರು ಎಂದು ನುಡಿಯುತ್ತಾರೆ. ಕರಿಯಪ್ಪ ನ ತಂದೆ ತಾಯಿಗಳು ತೀರಿಕೊಂಡಿದ್ದರಿಂದ ಆತನನ್ನು ವಾದಿ ಮತ್ತು ನನ್ನ ತಾಯಿ ಸಾಕಿ ಸಲಹಿದರು ಎಂದರೆ ಸರಿಯಲ್ಲ. ದ್ಯಾಮಕ್ಕನು ಸಾಕಿರುತ್ತಾರೆಂದು ನುಡಿಯುತ್ತಾರೆ. ನನ್ನ ತಾಯಿ ಕರಿಯಪ್ಪನನ್ನು ಸಾಕಿ ಅವರ ಮಗಳು ಸಿದ್ದಮ್ಮನನ್ನು ಅಂದರೆ ಈ ಕೇಸಿನ 2 ನೇ ಪ್ರತಿವಾದಿಯನ್ನು ಕೊಟ್ಟು ಮದುವೆ ಮಾಡಿಸಿದ್ದರು ಎಂದರೆ ಅವರು ಮದುವೆ ಮಾಡಿಸಿದ್ದು ನಿಜ ಆದರೆ ಅವರು ಸಾಕಿಲ್ಲ ಎಂದರೆ ಸರಿ . ಸಿದ್ದಮ್ಮನನ್ನು ಮದುವೆಯಾದ ನಂತರ 3 ಜನ ಮಕ್ಕಳಿದ್ದರು ಎಂದರೆ ಸರಿ . ಅವರ ಮಕ್ಕಳು ಬಸಮ್ಮ , ಪಾರಮ್ಮ , ಮಂಜುನಾಥ ಎಂದರೆ ಸರಿ . ನಾನು ಮದುವೆಯಾಗಿದ್ದು 2 ನೇ ಪ್ರತಿವಾದಿ ಸಿದ್ದಮ್ಮನ ಮಗಳಾದ ಪಾರಮ್ಮನನ್ನು ಮದುವೆಯಾಗಿದ್ದೇನೆ. ಇವರ ಪೈಕಿ ಬಸಮ್ಮ ತೀರಿಕೊಂಡಿದ್ದಾರೆ ಮಂಜುನಾಥ ಮತ್ತು ಪಾರಮ್ಮ ಇದ್ದಾರೆ . ನಿಪಿ-1 ನ್ನು ಒಟ್ಟು ಕುಟುಂಬದ ಸದಸ್ಯರಲ್ಲ ಎಂದು ತೋರಿಸುವ ಸಲುವಾಗಿ ಮಂಜುನಾಥ ಮೈನರ್ ಗಾರ್ಡಿಯನ್ ಕರಿಯಪ್ಪನ ಮಗ ಎಂದು ಸೇರಿಸಿ ಸುಳ್ಳು ದಾಖಲೆ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಸಿದ್ದಮ್ಮನಿಗೆ ಪ್ರತಿವಾದಿ ನಂ.4 ರಲ್ಲಿ ರವರಿಗಾಗಿ ಕರಿಯಪ್ಪನ ಮೈನರ್ ಗಾರ್ಡಿಯನ್ ಗಾಗಿ ದಾವಾ ಸ್ವತ್ತುಗಳಲ್ಲಿ ಐಟಂ ನಂ.12 ಕ್ಕೆ ಸಂಬಂದಿಸಿದಂತೆ ಯಾವುದೇ ದಾನ ಪತ್ರ ಮಾಡಿಕೊಳ್ಳಲು ಹಕ್ಕು ಅದಿಕಾರ ಇರಲಿಲ್ಲ ಎನ್ನುವುದು ಸರಿಯಲ್ಲ, ನಾನು ವಾದಿ ಹಾಗೂ ಪ್ರತಿವಾದಿ 1, 2 ನೇದವರು ದಾವಾ ಸ್ವತ್ತುಗಳನ್ನು ಒಟ್ಟು ಕುಟುಂಬದ ಸದಸ್ಯರಾಗಿ ಅನುಬವಿಸುತ್ತ ಬರುತ್ತಿದ್ದೆವು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಸಿದ್ದಮ್ಮ ನ ಗಂಡ ಕರಿಯಪ್ಪ ಇದ್ದಾನೆ ಇಲ್ಲ ಎಂಬುವ ಬಗ್ಗೆ

ಮಾಹಿತಿ ಇಲ್ಲ ಆತನು ಮೃತ ಪಟ್ಟನು ಇಲ್ಲ ಎಂಬ ಬಗ್ಗೆ ಮಾಹಿತಿ ಇಲ್ಲ, ಈ ವಿಷಯಕ್ಕೆ ಸಂಬಂದಪಟ್ಟಂತೆ ಸಿದ್ದಮ್ಮನಾಗಲಿ ನಾನಾಗಲಿ ನನ್ನ ಸಹೋದರಿಯ ಗಂಡ ಏನಾಗಿದ್ದಾನೆ ಎನ್ನುವ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿ. ಈಗ್ಗೆ 45 ವರ್ಷಗಳ ವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿ.

ನನ್ನ ತಂದೆ ಗಳಿಸಿದ ಆಸ್ತಿಗಳಲ್ಲಿ ಆದಾಯ ಗಳಿಸಿ ನಾನು ಆಸ್ತಿಗಳನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 83 ರಲ್ಲಿನ 15 ಎಕರೆ 13 ಗುಂಟೆ ನಿಪಿ -9 ರ ಪ್ರಕಾರ ಐಟಂ ನಂ.1 ರ ಆಸ್ತಿ ಅಡಿಕೆ ತೋಟ ಎಂದರೆ ಸರಿಯಲ್ಲ ಅದು ಬೀಳು ಬಿದ್ದಿದೆ ಜಾಲಿ ಮರಗಳು ಇವೆ ಎಂದು ನುಡಿಯುತ್ತಾರೆ. ನಿಪಿ-9 ರ ಪ್ರಕಾರ ಅಡಿಕೆ ತೋಟವಿದೆ. ನಿಪಿ-10 ರಿಂದ 12 ರ ಪ್ರಕಾರ ಅಡಿಕೆ ಇದೆ ತೋರಿಸಿದೆ ಎಂದರೆ ಅದು ಯಾವ ರೀತಿ ಹೇಗೆ ಬಂದಿದೆ ಗೊತ್ತಿಲ್ಲ. ಸರ್ವೆ ನಂ.85 /1 ಎ ರಲ್ಲಿ ನಿಪಿ-14 ರಿಂದ 17 ರಲ್ಲಿ ಐಟಂ ನಂ.2 ದಾವಾ ಸ್ವತ್ತಿನಲ್ಲಿ 4 ಎಕರೆ 2 ಗುಂಟೆ ಈ ಸ್ವತ್ತಿನಲ್ಲಿ ಅಡಿಕೆ ತೋಟ ಮತ್ತು ತೆಂಗು ತೇಗದ ಮರಗಳು ಮತ್ತು ಬೋರು, ಕೊಳವೆ ಬಾವಿ ಇದೆ ಎಂದರೆ ಅಡಿಕೆ ಬಿಟ್ಟು ಉಳಿದವು ಇವೆ ಎಂದು ನುಡಿಯುತ್ತಾರೆ. ಐಟಂ ನಂ.3 ರಲ್ಲಿ ಇವುಗಳು ಸಹ ನನ್ನ ಹೆಸರಿನಲ್ಲಿದ್ದು ನಿಪಿ-19 ರಲ್ಲಿ ಮಾವು ಮತ್ತು ಅಡಿಕೆ ಮರಗಳು ಇವೆ ಎಂದರೆ ಸರಿ. ದಾವಾ ಐಟಂ ನಂ.5 ರಲ್ಲಿ ಅದು ಸಹ ನನ್ನ ಹೆಸರಿನಲ್ಲಿದ್ದು ಇಡೀ ಜಮೀನಿನಲ್ಲಿ ತೇಗ, ತೆಂಗು ಅಡಿಕೆ ಮರಗಳು ಇವೆ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ ನಂ.6 ರಲ್ಲಿ ನಿಪಿ-29 ರ ಪ್ರಕಾರ ಬೆದ್ದಲು ಜಮೀನು ಆಗಿದ್ದು ಇದರಲ್ಲಿ ಕೂಡ ಆರ್ಥಿಕ ಬೆಳೆಗಳನ್ನು ಬೆಳೆಯುತ್ತಿದ್ದೇವೆ ಎಂದರೆ ಸರಿಯಲ್ಲ ಅದು ಬೀಳು ಬಿದ್ದಿದೆ ಎಂದು ನುಡಿಯುತ್ತಾರೆ. ಅವುಗಳಲ್ಲಿ ಆರ್ಥಿಕ ಬೆಳೆಗಳಾದ ಜೋಳ, ರಾಗಿ ನವಣೆ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ದಾವಾ ಷೆಡ್ಯೂಲ್ 1 ರಿಂದ 10 , 13 ರಿಂದ 14 ನೇ ಸ್ವತ್ತುಗಳು ಬಹಳ ಪಲವತ್ತಾದ ಬೆಳೆ ಮತ್ತು ಮರಗಳು ಇರುವ ಸ್ವತ್ತುಗಳು ಎಂದರೆ ಸರಿಯಲ್ಲ. ಆದ್ದರಿಂದ ಅಲ್ಲಿ ಅಡಿಕೆ ತೋಟ ತೆಂಗು ಮಾವು ತೇಗ ಮುಂತಾದ ಕೃಷಿ ಮಾಡಿ ವಾರ್ಷಿಕವಾಗಿ 400 ಚೀಲ ಅಡಿಕೆ ಗಳಿಸುತ್ತಿದ್ದೇನೆ

ಎನ್ನುವುದು ಸರಿಯಲ್ಲ. ಇಷ್ಟೆಲ್ಲಾ ಆದಾಯವನ್ನು ನಾನು ಒಟ್ಟು ಕುಟುಂಬದಿಂದ ಪಡೆದಿದ್ದರಿಂದ ನಾನು ನನ್ನ ಹೆಸರಿನಲ್ಲಿ ಆಸ್ತಿಗಳನ್ನು ಗಳಿಸಿದ್ದೇನೆ ಆದ್ದರಿಂದ ಅವುಗಳು ಕೂಡ ನಮ್ಮ ಅಂದರೆ ವಾದಿ ಮತ್ತು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಎನ್ನುವುದು ಸರಿಯಲ್ಲ. ನಾನು ಹಿರಿಯ ಮಗನಾಗಿ ದ್ದರಿಂದ ಮನೆತನದ ಆಸ್ತಿಪಾಸ್ತಿ ವ್ಯವಹಾರ ಮತ್ತು ಜವಾಬ್ದಾರಿಗಳನ್ನು ವಹಿಸಿಕೊಂಡು ಕರ್ತ ನಾಗಿ ಇದ್ದೆ ಎಂದರೆ ಸರಿ . ಮನೆತನದ ಹಿರಿಯ ಮಗನಾಗಿದ್ದರಿಂದ ನಮ್ಮ ಒಟ್ಟು ಕುಟುಂಬದ ಜಮೀನುಗಳನ್ನು ಅಬಿವೃದ್ಧಿ ಪಡಿಸುವ ಗೊಸ್ಕರ ತನ್ನ ತಂದೆಯ ಆಸ್ತಿಗಳಿಂದ ಗಳಿಸಿದ ಆದಾಯದಿಂದ ಟ್ರಾಕ್ಟರ್ ಟ್ರೇಲರ್ ಮತ್ತು ಮಾರುತಿ ಕಾರು ಇವುಗಳನ್ನೆಲಾ ಖರೀದಿಸಿದ್ದೇನೆ ಎಂದರೆ ಸರಿಯಲ್ಲ.
ನಾನು ಸ್ವಂತ ದುಡಿಮೆ ಯಿಂದ ಖರೀದಿಸಿದ್ದೇನೆ ಎಂದು ನುಡಿಯುತ್ತಾರೆ . ನಾನು ಕರ್ತನಾಗಿ ಮನೆಯ ಆಸ್ತಿಗಳನ್ನು ನಿರ್ವಹಿಸುವ ಕಾಲಕ್ಕೆ ಅದರಿಂದ ಬಂದ ಆದಾಯದಿಂದ ಈ ವಾಹನಗಳನ್ನು ಸಹ ನಾನು ಖರೀದಿಸಿದ್ದೇನೆ ಎನ್ನುವುದು ಸರಿಯಲ್ಲ . ನಮ್ಮ ಮನೆತನದ ಆಸ್ತಿಯ ನಿರ್ವಹಣೆಯಿಂದ ಬಂದ ಆದಾಯದಿಂದ 4 ಕೆಜಿ ಚಿನ್ನದ ಆಬರಣಗಳನ್ನು ಖರೀದಿಸಿದ್ದೇನೆ ಎಂದರೆ ಸರಿಯಲ್ಲ.

ಒಟ್ಟು ಕುಟುಂಬದ ಆಸ್ತಿಯ ಆದಾಯದಿಂದ ಗಳಿಸಿದ ಲಾಬದ ಹಣ ಒಟ್ಟು 3 ಕೋಟಿ ಹಣವನ್ನು ಚಿತ್ರದುಗದ ಮರ್ಚೆಂಟ್ ಬ್ಯಾಂಕ್ನಲ್ಲಿ ಠೇವಣಿಯನ್ನು ವಾದಿಗೆ ಗಮನಕ್ಕೆ ಬರದಂತೆ ಇಟ್ಟಿದ್ದೇನೆ ಎಂದರೆ ಸರಿಯಲ್ಲ . ನಾನು ನಿವೃತ್ತ ಪ್ರೊಫೆಸರ್ ಆಗಿ ಕಾರ್ಯ ನಿರ್ಹಿಸಿ ನಿವೃತ್ತಿ ನಂತರ ಬಂದ ಹಣವನ್ನು ನನ್ನ ಕುಟುಂಬದ ಒಟ್ಟು ಕುಟುಂಬದ ದೇಖಿ ರೇಖಿ ಗಳನ್ನು ನೋಡಿಕೊಳ್ಳಲು ಖರ್ಚು ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಪ್ರತಿ ವರ್ಷ ಐಟಿ ರಿಟರ್ನ್ ಸರ್ವಿಸಿನಲ್ಲಿದ್ದಾಗಲೂ ಸಲ್ಲಿಸಿದ್ದೇನೆ. ಅವುಗಳಲ್ಲಿ ನಾನು ನನಗೆ ಇದ್ದ ಆದಾಯ ಮತ್ತು ಆ ಸಂದರ್ಬದಲ್ಲಿ ನಾನು ನನ್ನ ಹೆಸರಿಗೆ ಗಳಿಸಿದ ಯಾವುದೇ ಆಸ್ತಿಗಳ ವಿವರಗಳನ್ನು ಕಾಣಿಸಿಲ್ಲ. ನನಗೆ ಯಾವುದೇ ಆದಾಯ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಷೆಡ್ಯೂಲ್ ಸ್ವತ್ತುಗಳಿಂದ ಗಳಿಸಿದ 500 ರಿಂದ 600 ಅಡಿಕೆ ಚೀಲ ಇವುಗಳನ್ನು ಈ ದಾವಾ ಸಲ್ಲಿಸಿದ ಕೂಡಲೇ

ನಂತರ ಸ್ಟಾಕ್ ಇರುವ ಮಾಲುಗಳನ್ನು ಬಿಟಿ ಚನ್ನಬಸಪ್ಪ ಅಂಡ್ ಕೋ ರವರಿಗೆ ವಾದಿಯ ಗಮನಕ್ಕೆ ಬರದಂತೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಅಡಿಕೆಯನ್ನು ಮೊದಲು ಬೀಮಸಮುದ್ರದ ಬಿಟಿ ಚನ್ನಬಸಪ್ಪರವರಿಗೆ ಕೊಡುತ್ತಿದ್ದೆ . ನಂತರ ಮನೆಬಾಗಿಲಿಗೆ ಯಾರು ಬಂದೋ ಅವರಿಗೆ ಕೊಡುತ್ತೇನೆ, ಎಷ್ಟು ಎಂದು ಲೆಕ್ಕ ಇಟ್ಟಿಲ್ಲ. ನಾನು ನನ್ನ ಹೆಸರಿನಲ್ಲಿ ಮಾಡಿಕೊಂಡಿರುವ ಆಸ್ತಿಗಳು ಅಂದರೆ ಜಮೀನುಗಳು , ವಾಹನಗಳು , ನಗದು ಹಣ ಮತ್ತು ಚಿನ್ನ ಹಾಗೆಯೇ ಕೃಷಿ ಉತ್ಪನ್ನಗಳಾದ ಅಡಿಕೆ ಮುಂತಾದವುಗಳು ಇವುಗಳನ್ನು ಎಲ್ಲವೂ ಕೂಡ ನಮ್ಮ ಒಟ್ಟು ಕುಟುಂಬದ ಆಸ್ತಿಗಳ ಉತ್ಪನ್ನದಿಂದ ಗಳಿಸಿದ್ದೇನೆ ಆದ್ದರಿಂದ ಅವೆಲ್ಲವೂ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ.

ವಾದಿಯ ಸಹೋದರಿ ಸಿದ್ದಮ್ಮನ ಮಗಳನ್ನು ಮದುವೆ ಮಾಡಿಕೊಂಡು ಅವರ ತಮ್ಮ ಮಂಜುನಾಥ ಆತನನ್ನು ಮೈನರ್ ಗಾರ್ಡಿಯನ್ ಎಂದು ಹೇಳಿ ಸಿದ್ದಮ್ಮನಿಗೆ 2 ನೇ ಪ್ರತಿವಾದಿಗೆ ಆ ರೀತಿ ಐಟಂ ನಂ.12 ರ ಆಸ್ತಿಯನ್ನು ಬರೆದುಕೊಡಲು ಅಥವಾ ದಾನ ಪತ್ರ ಮಾಡಿಕೊಡಲು ಹಕ್ಕು ಅದಿಕಾರ ಇಲ್ಲದ ಕಾರಣ ನಿಪಿ-1 ದಾಖಲೆಯನ್ನು ಒಟ್ಟು ಕುಟುಂಬದ ಆಸ್ತಿಯಲ್ಲ ಎಂದು ತೋರಿಸಿಕೊಳ್ಳಲು ದಿಃ 06.05.2015 ರಂದು ದಾನ ಪತ್ರ ಎಂಬ ದಾಖಲೆ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಈ ಆಸ್ತಿಯು ವಾದಿ ಮತ್ತು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಎಂದು ಗೊತ್ತಿದ್ದರೂ ಸಹ ಸಿದ್ದಮ್ಮನ ಆಸ್ತಿಯೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ ಆ ಆಸ್ತಿಗೂ ನನಗೂ ಸಂಬಂದವೇ ಇಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿ ಬಹಳ ಪಲವತ್ತಾದ ಜಮೀನು ಆದ್ದರಿಂದ ಅದರಲ್ಲಿ ಅಡಿಕೆ ಮತ್ತು ಕೊಳವೆ ಬಾವಿ ಎಲ್ಲಾ ಇದ್ದು ಬಹಳ ಆದಾಯ ಬರುತ್ತಿದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಅದರಲ್ಲಿ ಮಾವು ತೆಂಗು ಅಡಿಕೆ ಕೂಡ ಇರುವುದರಿಂದ ವಾದಿಗೆ ಬಾಗ ಕೊಡಬೇಕಾಗುತ್ತದೇ ಎಂಬ ಉದ್ದೇಶಕ್ಕೆ ನಾನು ಮತ್ತು ಸಿದ್ದಮ್ಮ ಸೇರಿ ಸದರಿ ಆಸ್ತಿಯನ್ನು ಲಪಟಾಯಿಸುವ ಉದ್ದೇಶಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಮತ್ತು ನಿಪಿ-1 ರ ದಾಖಲೆ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ನಿಡಿ-1ರ ಸಿದ್ದಮ್ಮ ಮತು ಕರಿಯಪ್ಪನ ಕುಟುಂಬಕ್ಕೆ ಸಂಬಂದಿಸಿದ ವಂಶ ವೃಕ್ಷ ಎಂದರೆ ಸರಿಯಲ್ಲ. ಮತ್ತು ನಾನು ವಾದಿ ಎಂದರೆ ನಮ್ಮ ಕುಟುಂಬಕ್ಕೆ ಸಂಬಂದಿಸಿದ ವಂಶ ವೃಕ್ಷ ಸಲ್ಲಿಸಿದ್ದೇನೆ . ನಾನು ನಿಡಿ-2 ರ ದಾಖಲೆ ಪಡಿತರ ಚೀಟಿ ಅಂದಾಜು 1982 ರ ಸಾಲಿಗೆ ಸಂಬಂದಿಸಿದ್ದು ಎಂದರಿ ಸರಿ . ಒಟ್ಟು ಕುಟುಂಬಂದ ಸದಸ್ಯರೆಂದು ನಾನು ಮತ್ತು ತಂದೆ ತಾಯಿಯನ್ನು ಕಾಣಿಸಲಾಗಿದೆ. ನಿಡಿ-5 ರ ದಾಖಲೆ ಈ ಕೇಸಿಗೋಸ್ಕರ ನಾನೇ ಸೃಷ್ಟಿಮಾಡಿಕೊಂಡ ದಾಖಲೆ ಎಂದರೆ ಸರಿಯಲ್ಲ. ನಿಡಿ-7ರಲ್ಲಿ ಅಂದರೆ ಐಟಿ ರಿಟರ್ನ ಅಕ್ನಾಲೆಡ್ಜಮೆಂಟ್ ನಲ್ಲಿ ದಾವಾ ಆಸ್ತಿಗಳಿಂದ ಬಂದ ಉತ್ಪನ್ನ ಮತ್ತು ಆದಾಯ ಮತ್ತು ಗಳಿಸಿದ ಆಸ್ತಿಗಳ ಬಗ್ಗೆ ಕಾಣಿಸಿಲ್ಲ ಎಂದರೆ ಅದು ಅಸೆಸ್‌ಮೆಂಟ ಆದ್ದರಿಂದ ಕಾಣಿಸಿಲ್ಲ ಎಂದು ನುಡಿಯುತ್ತಾರೆ. 2021 ರ ಆದಾಯ ತೆರಿಗೆ ಹಾಜರುಮಾಡಿದ್ದು ಅದಕ್ಕಿಂತ ಹಿಂದಿನ ಐಟಿ ರಿಟರ್ನ್ಸ ಹಾಜರು ಮಾಡಿಲ್ಲ. ನಿಡಿ-8ರಲ್ಲಿ 16.10.1967 ನ ಪ್ರಕಾರ 101 ನೇ ಸರ್ವೆ ನಂಬರ್ ಗೆ ಸಂಬಂದಿಸಿದ್ದಾಗಿ ಅದು ದಾವಾ ಷೆಡ್ಯೂಲ್ 3 ಕ್ಕೆ ಸಂಬಂದಿಸಿದಂತೆ ಹಾಜರು ಮಾಡಿದ್ದು ಈ ದಾಖಲೆಯ ಸಂಬಂದ ನನ್ನ ಲಿಖಿತ ಹೇಳಿಕೆಯಲ್ಲಿ ಕಾಣಿಸಿದ್ದೇನೆ. ಸದರಿ ದಾಖಲೆ ವೈಯಕ್ತಿಕವಾಗಿ ನನ್ನ ಹೆಸರಿನಲ್ಲಿಲ್ಲ ಎಂದರೆ ಸರಿ . ನಿಡಿ-9 ರ ಕ್ರಯ ಪತ್ರ ಕೂಡ ನನ್ನ ಹೆಸರಿನಲ್ಲಿಲ್ಲ ಎಂದರೆ ಸರಿ. ಈ ದಾಖಲೆ ಕೂಡ ಸರ್ವೆ ನಂಬರ್ 101 ಕ್ಕೆ ಸಂಬಂದಿಸಿದ್ದಾಗಿದೆ. ಈ ಕ್ರಯ ಪತ್ರ ದಾಖಲೆ ಯಾರು ಯಾರಿಗೆ ಬರೆದುಕೊಟ್ಟರು ಮತ್ತು ಅದಕ್ಕೆ ಸಂಬಂದಿಸಿದ ವಿವರಗಳು ನನ್ನ ತಕರಾರಿನಲ್ಲಿ ಹೇಳಿದ್ದೇನೆ. ನನ್ನ ತಂದೆ ಅದನ್ನು ಖರೀದಿಸಿದ್ದಾರೆ . ಅದು ನನ್ನ ತಂದೆ ಕೊಂಡುಕೊಂಡಿದ್ದರಿಂದ ಈ ಆಸ್ತಿ ಕೂಡ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ . ನಾನು ಮನೆಯ ಕರ್ತನಾಗಿ ಅದರಲ್ಲಿ ಬಂದ ಆದಾಯವನ್ನು ನಾನು ತೆಗೆದುಕೊಂಡಿದ್ದೇನೆ ಎಂದರೆ ಸರಿ . ನಿಡಿ-10 ರ ದಾಖಲೆಯ ಪ್ರಕಾರ 15 ಗುಂಟೆ ನನ್ನ ತಂದೆ ಕೊಂಡ ಆಸ್ತಿಯಾಗಿರುತ್ತದೆ. 1997 ರಲ್ಲಿ ನನ್ನ ತಂದೆ ಈ ಆಸ್ತಿಯನ್ನು ಖರೀದಿಸುವ ಕಾಲಕ್ಕೆ ನಾನು ನೌಕರಿಯಲ್ಲಿದ್ದೆ. ನನ್ನ ತಂದೆ ಅವರಿಗೆ ಇದ್ದ ಉಳಿದ ಆಸ್ತಿಗಳ ಆದಾಯದಿಂದ ಅವರು ಖರೀದಿಗೆ ಇಡಿದಿದ್ದಾರೆ ಎಂದರೆ ಸಾಕ್ಷಿ ಮುಂದುವರೆದು ನಾನು ಅದನ್ನು ಖರೀದಿಸಿ ನನ್ನ ತಂದೆಯ

ಹೆಸರಿಗೆ ಮಾಡಿಸಿದ್ದೇನೆ ಎಂದು ನುಡಿಯುತ್ತಾರೆ. ನೌಕರಿಯಲ್ಲಿದ್ದ ಕಾರಣ ಜಮೀನು ಖರೀದಿಸಲು ಅನುಮತಿ ಇರಲಿಲ್ಲ ಎಂದು ನುಡಿಯತ್ತಾರೆ. ಆದ್ದರಿಂದ ನೌಕರಿಯಲ್ಲಿರುವ ಕಾಲಕ್ಕೆ ಯಾವುದೇ ಆಸ್ತಿಗಳನ್ನು ಖರೀದಿಸಿಲ್ಲ ಎಂದರೆ ಸರಿಯಲ್ಲ. ನಾನು ಹಣಕೊಟ್ಟು ನನ್ನ ತಂದೆಯ ಹೆಸರಿನಲ್ಲಿ ಖರೀದಿಸಿದ್ದೇನೆ ಎಂದು ನುಡಿಯುತ್ತಾರೆ.

ನಿಡಿ-11 ರ ದಾಖಲೆ ಗುಡಿಸಲು ಮನೆಯ ಶುದ್ಧ ಕ್ರಯ ಪತ್ರ 2001 ನೇ ಸಾಲಿನಲ್ಲಿ ನಾನು ನನ್ನ ಹೆಸರಿನಲ್ಲಿ ಖರೀದಿ ಇಡಿದಿದ್ದೇನೆ . ಅದು ಮನೆ ಆದ್ದರಿಂದ ನಾನು ಖರೀದಿಸಲು ಅವಕಾಶ ಇದ್ದು ನಾನು ನೌಕರಿಯಲ್ಲಿದ್ದಾಗಲೇ ಖರೀದಿಸಿದ್ದೇನೆ. ಇದೂ ಸಹ ಒಟ್ಟು ಕುಟುಂಬದ ಆದಾಯದಿಂದ ಗಳಿಸಿದ ಆಸ್ತಿ ಎನ್ನುವುದು ಸರಿಯಲ್ಲ.

ನಿಡಿ-12 ರ ದಾಖಲೆಗೆ 1 ಲಕ್ಷದ 90 ಸಾವಿರ ಬೆಲೆಇರುವ ಆಸ್ತಿಯನ್ನು 2003 ರಲ್ಲಿ ನಾನು ನೌಕರಿಯಲ್ಲಿದ್ದಾಗಲೇ ಖರೀದಿಸಿದ ಆಸ್ತಿಯಾಗಿರುತ್ತದೆ. ನಿಡಿ-12 ರ ದಾವಾ ಸ್ವತ್ತು ಐಟಂ ನಂ.4 ರ ಆಸ್ತಿ 1 ಎಕರೆ 8 ಗುಂಟೆ ಕೂಡ ಒಟ್ಟು ಕುಟುಂಬದ ಆದಾಯದಿಂದ ಬಂದ ಹಣದಿಂದ ವಾದಿಯ ಗಮನಕ್ಕೆ ಬರದಂತೆ ನನ್ನ ಹೆಸರಿಗೆ ಖರೀದಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಆ ಕಾಲಕ್ಕೆ ನನ್ನ ತಂದೆ ಜೀವಂತ ಇರಲಿಲ್ಲ. ಆಗಾಗಿ ನನ್ನ ತಂದೆ ಜಮೀನುಗಳಲ್ಲಿ ಬಂದ ವರಮಾನದಿಂದ ನಾನು ಈ ಆಸ್ತಿಯನ್ನು ಮನೆಯ ಕರ್ತನಾಗಿ ಗಳಿಸಿದ್ದೇನೆ ಎಂದರೆ ಸರಿಯಲ್ಲ. ಈ ಆಸ್ತಿ ಕೂಡ ನಮ್ಮ ಮತ್ತು ವಾದಿಯರ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ನಿಡಿ-14 ರ ದಾಖಲೆಯಲ್ಲಿನ ಖಾತೆ ಎಕ್ಸಟ್ರಾಕ್ಟ ಹೊಳಲು ಗ್ರಾಮದ ಆಸ್ತಿ ಈ ಎಲ್ಲವೂ ಕೂಡ ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ನಿಡಿ-14 ರ ದಾಖಲೆಯನ್ನು ನನ್ನ ಸ್ವಂತ ಆಸ್ತಿ ಎಂದು ತೋರಿಸಿಕೊಳ್ಳುವ ಉದ್ದೇಶಕ್ಕೆ ಪಂಚಾಯತ್ ಅಧಿಕಾರಿಗಳನ್ನು ಶರೀಕು ಮಾಡಿಕೊಂಡು ತೆರಿಗೆ ಪಾವತಿ ರಶೀದಿಯನ್ನು ನನ್ನ ಹೆಸರಿಗೆ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಡಿ-15 ರಿಂದ 23 ರಲ್ಲಿ ಕಾಣಿಸಿದ ಪಹಣಿಗಳು ಈ ದಾಖಲೆಗಳು ಕೂಡ ಒಟ್ಟು ಕುಟುಂಬದ ಆಸ್ತಿಗಳಿಗೆ ಸಂಬಂದ ಪಟ್ಟ ದಾಖಲೆಗಳು ಎಂದರೆ ಸರಿಯಲ್ಲ. ಈ ಎಲ್ಲಾ ದಾವಾ ಷೆಡ್ಯೂಲ್ ಆಸ್ತಿಗಳು ನಮ್ಮ

ಒಟ್ಟು ಕುಟುಂಬದ ಆಸ್ತಿಗಳಾಗಿದ್ದರು ಸಹ ನಿಡಿ –1 ರಿಂದ 23 ದಾಖಲೆಗಳನ್ನು ನಾನು ಸೃಷ್ಟಿಮಾಡಿಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ನಮ್ಮ ವಾದಿ ಮತ್ತು ಪ್ರತಿವಾದಿಯ ಒಟ್ಟು ಕುಟುಂಬದ ಕರ್ತನಾಗಿ ಮನೆಯ ನಿರ್ವಹಣೆ ಮಾಡಿ ಅದರಿಂದ ಬಂದ ಆದಾಯದಿಂದ ನಾನು ನನ್ನ ಹೆಸರಿಗೆ ಆಸ್ತಿಗಳನ್ನು ಖರೀದಿ ಮಾಡಿಕೊಂಡಿದ್ದು ಅವುಗಳೆಲ್ಲವೂ ಒಟ್ಟು ಕುಟುಂಬದ ಆಸ್ತಿಗಳಾದ್ದರಿಂದ ವಾದಿಗೆ ಸದರಿ ಆಸ್ತಿಗಳಲ್ಲಿ ಸಮ ಹಿಸ್ಸಾ ಇದೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಲ್ಲಿಸಿರುವ ಎಲ್ಲಾ ಸಂಗತಿಗಳು ಸುಳ್ಳು ಸಂಗತಿಗಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ